# ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ,

ಪ್ರದಾನ ಕಛೇರಿ : ಮಾನ್ವಿ ಜಿಲ್ಲೆ ॥ ರಾಯಚೂರು

---

## –:28 ನೇ ವಾರ್ಷಿಕ ಮಹಾಸಭೆಯ ನಡುವಳಿಕೆಗಳು:–

## (ಸೌಹಾರ್ದ ಸಹಕಾರಿ ಕಾಯ್ದೆ ಅಡಿಯಲ್ಲಿ 22 ನೇ ಸಭೆ)

ಸಭೆಯಲ್ಲಿ ಹಾಜರಿದ್ದ ಸದ್ಯಸರ ಸಂಖ್ಯೆ:

| | | |
|---|---|---|
| ಖುದ್ದಾಗಿ ಹಾಜರಿದ್ದವರು | – | 130 |
| ವರ್ಚುವಲ್ ಮೂಲಕ ಹಾಜರಿದ್ದವರು | – | 015 |
| ಓಟ್ಟು ಹಾಜರಿದ್ದವರು | – | 145 |

ಸನ್ 2021–22 ನೇ ಸಾಲಿನ ಬ್ಯಾಂಕಿನ ವಾರ್ಷಿಕ ಮಹಾಸಭೆಯು ದಿನಾಂಕ:–28.08.2022 ರಂದು ಭಾನುವಾರ ಮುಂಜಾನೆ 11.30 ಗಂಟೆಗೆ ದಿ// ಶ್ರೀಮತಿ ಆರ್. ಸುಬದ್ರಮ್ಮ ವಿಠೋಬ ಶೆಟ್ಟಿ ಪದವಿ ಕಾಲೇಜ ಆರ್ ಜಿ ಕ್ಯಾಂಪ್ ರಸ್ತೆ ಸಾಯಿ ಬಾಬಾ ಟೇಂಪಲ್ ಮಾನ್ವಿಯಲ್ಲಿ ಬ್ಯಾಂಕಿನ ಅದ್ಯಕ್ಷರಾದ ಶ್ರೀ ಆರ್.ತಿಮ್ಮಯ್ಯ ಶೆಟ್ಟಿ ಇವರ ಅದ್ಯಕ್ಷತೆಯಲ್ಲಿ ಜರುಗಿ ಕೆಳಕಂಡ ವಿಷಯಗಳನ್ನು ಚರ್ಚಿಸಿ ನಿರ್ಣಯಿಸಲಾಯಿತು.

ಸಭೆಯ ಪ್ರಾರಂಭದಲ್ಲಿ ಗಾಂಧಿ ಸ್ಮಾರಕ ಹೈಸ್ಕೂಲ್ ವಿಧ್ಯಾರ್ಥಿನಿಯರ ತಂಡದವರಿಂದ ಪ್ರಾರ್ಥನೆ ಗೈಯ್ಯುವದರದೊಂದಿಗೆ ಪ್ರಾರಂಭಗೊಂಡಿತು. ಪ್ರಾರಂಭದಲ್ಲಿ ಶ್ರೀ ಗೋಪಾಲಕೃಷ್ಣ ವ್ಯವಸ್ಥಾಪಕ ನಿರ್ದೇಶಕರು ಸಭೆಯಲ್ಲಿ ಹಾಜರಿರುವ ಹಾಗೂ ವರ್ಚುವಲ್ ಮೂಲಕ ಹಾಜರಿರುವ ಸದಸ್ಯರನ್ನು ಮತ್ತು ಆಡಳಿತ ಮಂಡಳಿ ಸದಸ್ಯರನ್ನು ಸ್ವಾಗತಿಸಿದರು.

ಸಭೆಯ ಕಾರ್ಯಕಲಾಪಕ್ಕೂ ಮುನ್ನ ಸನ್ 2021–22 ನೇ ಸಾಲಿನಲ್ಲಿ ಮೃತರಾದಬ್ಯಾಂಕಿನ ಸದಸ್ಯರಿಗೆ ಶ್ರದ್ಧಾಂಜಲಿ ಅರ್ಪಿಸಿ ಈ ಕೆಳಗಿನಂತೆ ವಿಷಯಗಳ ಚರ್ಚೆ ಪ್ರಾರಂಭಗೊಂಡಿತು.

<u>**ವಿಷಯ** 01:– 27 ನೇ ಸರ್ವ ಸದಸ್ಯರ ಮಹಾ ಸಭೆ ನೋಟೀಸು ಓದಿ ದಾಖಲು ಮಾಡುವುದು</u>

**ನಡುವಳಿಕೆಗಳು:=** 27 ನೇ ಸರ್ವ ಸದಸ್ಯರ ಮಹಾ ಸಭೆ ನೋಟೀಸನ್ನು ಸಭೆಯಲ್ಲಿ ಓದಿ ದಾಖಲಿಸಲಾಯಿತು.

<u>ವಿಷಯ 02:–ಹಿಂದಿನ ದಿನಾಂಕ 22.11.2021 ರಂದು ನೆಡೆದ ವಾರ್ಷಿಕ ಮಹಾ ಸಭೆಯ ಗೊತ್ತುವಳಿಗಳನ್ನು ಓದಿ ಧೃಢೀಕರಿಸುವ ಬಗ್ಗೆ.</u>

**ನಡುವಳಿಕೆಗಳು:=** ಹಿಂದಿನ ದಿನಾಂಕ 22.11.2021 ರಂದು ನೆಡೆದ ವಾರ್ಷಿಕ ಮಹಾ ಸಭೆಯ ಗೊತ್ತುವಳಿಗಳನ್ನು ಸಭೆಯಲ್ಲಿ ಓದಿ ಧೃಢೀಕರಿಸಲಾಯಿತು

**ವಿಷಯ 03:– ಮಂಡಳಿಯು ಸಲ್ಲಿಸಿದ ವಾರ್ಷಿಕ ವರದಿಯ ಪರಿಗಣನೆ.**

**ನಡುವಳಿಕೆಗಳು:=** ಸನ್ 2021–22 ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯಲ್ಲಿ ಅಧ್ಯಕ್ಷರು ಮಂಡಿಸಿದ್ದನ್ನು ಸಭೆಯು ಪರಿಶೀಲಿಸಿ ಒಪ್ಪಿಗೆ ನೀಡಿತು.

**ವಿಷಯ 04 :–ಲೆಕ್ಕ ಪರಿಶೋದಕರು ಮತ್ತು ಆಂತರಿಕ ಲೆಕ್ಕ ಪರಿಶೋದಕರ ನೇಮಕ ಹಾಗೂ ಅವರಿಗೆ ಕೊಡಬಹುದಾದ ಸಂಭಾವನೆಯ ನಿರ್ಧಾರಣೆ.**

**ನಡುವಳಿಕೆಗಳು:=** ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ ಮತ್ತು ನಿಯಮದ ಪ್ರಕಾರ ಭಾರತೀಯ ರಿಜರ್ವ ಬ್ಯಾಂಕ ಇವರು ಒಪ್ಪಿಗೆ ನೀಡುವ ಸಂಸ್ಥೆಯನ್ನು ಸನ್ 2022–23 ನೇ ಸಾಲಿನ ಶಾಸನಬಧ್ಧ ಲೆಕ್ಕ ಪರಿಶೋದಕನ್ನಾಗಿ ನೇಮಿಸಿಕೊಳ್ಳಬೇಕದ್ದರಿಂದ ಬ್ಯಾಂಕು ಸಲ್ಲಿಸಿದ M/s PNR & Co ಬೆಂಗಳೂರು ಪ್ರಸ್ತಾವನೆಗೆ RBI ಒಪ್ಪಿಗೆ ಬಂದಲ್ಲಿ ಅವರನ್ನು ಸನ್ 2022–23 ನೇ ಸಾಲಿನ ಶಾಸನ ಬದ್ಧ ಲೆಕ್ಕ ಪರಿಶೋಧಕರನ್ನಾಗಿ ನೇಮಿಸಿಕೊಳ್ಳಲು ಮಹಾ ಸಭೆಯು ಅನುಮೋದಿಸಿತು. ಆಂತರಿಕ ಲೆಕ್ಕ ಪರಿಶೋದಕರನ್ನು ನೇಮಕ ಮಾಡಿಕೊಳ್ಳಲು ಹಾಗೂ ಲೆಕ್ಕ ಪರಿಶೋದಕರಿಗೆ ನೀಡಬಹುದಾದ ಸಂಭಾವನೆ ನಿರ್ಧಾರಣೆ ಮಾಡವ ಅಧಿಕಾರವನ್ನು ನಿರ್ದೇಶಕ ಮಂಡಳಿಯವರಿಗೆ ನೀಡಲು ಮಹಾ ಸಭೆಯು ಅನುಮೋದನೆ ನೀಡಿತು.

**ವಿಷಯ 05 :– ಲೆಕ್ಕ ಪರಿಶೋದನೆ ಪರಿಶೋದಕರ ವರದಿ ಮತ್ತು ಲೆಕ್ಕ ಪರಿಶೋದಿತ ತಃಖ್ತೆಗಳ ಪರಿಗಣನೆ.**

**ನಡುವಳಿಕೆಗಳು:=**, M/s PNR & Co ಬೆಂಗಳೂರು ಇವರು ನೀಡಿರುವ 2021–22ನೇ ಸಾಲಿನ ಲೆಕ್ಕ ಪರಿಶೋದನಾ ವರದಿ ಹಾಗೂ ಲೆಕ್ಕ ಪರಿಶೋದಿತ ತಃಖ್ತೆಗಳನ್ನು ಮಹಾ ಸಭೆಯು ಪರಿಶೀಲಿಸಿ ಅನುಮೋದಿಸಿತು.

**ವಿಷಯ 06 :– ಲೆಕ್ಕ ಪರಿಶೋದನಾ ವರದಿ ಪಾಲನಾ ವರದಿಯ ಪರಿಗಣನೆ.**

**ನಡುವಳಿಕೆಗಳು:=** ಸನ್ 2020–21 ನೇ ಸಾಲಿನ ಲೆಕ್ಕ ಪರಿಶೋದನಾ ವರದಿಗೆ ಆಡಳಿತ ಮಂಡಳಿಯು ಸಲ್ಲಿಸಿದ ಅನುಪಾಲನಾ ವರದಿಯನ್ನು ಮಹಾ ಸಭೆಯು ಈ ಕೆಳಗಿನಂತೆ ಪರಿಶೀಲಿಸಿ ಒಪ್ಪಿಗೆ ನೀಡಿತು.

**ವಿಷಯ 07 :– ನಿವ್ವಳ ಲಾಭವನ್ನು ವಿಲೇವಾರಿ ಮಾಡುವುದು.**

**ನಡುವಳಿಕೆಗಳು:=** ಪ್ರಸಕ್ತ ಸಾಲಿನಲ್ಲಿ ಬ್ಯಾಂಕು ರೂ 6,42,44,659.00 ಗಳಷ್ಟು ನಿವ್ವಳ ಲಾಭಗಳಿಸಿದ್ದು ಹಿಂದಿನವರ್ಷ ಅನುಭವಿಸಿದ್ದ ಹಾನಿಯಲ್ಲಿ ಇದನ್ನು ಕಳೆಯ ಬೇಕಾದ್ದರಿಂದ ಯಾವುದೇ ಲಾಭದ ವಿಲೇವಾರಿ ಇರುವದಿಲ್ಲವೆಂದು ನಿರ್ಣಯಿಸಿತು.

**ವಿಷಯ 08 :– ಕಾರ್ಯಾಚರಣೆಯ ಕೊರತೆ ಏನಾದರು ಇದ್ದಲ್ಲಿ ಅದರ ಪುನರಾವಲೋಕನ.**

**ನಡುವಳಿಕೆಗಳು:=** ಕಾರ್ವೆ ಸಂಸ್ಥೆಯಲ್ಲಿ ಗುಂತಾಯಿಸಿದ ಮೋತ್ತ ರೂ. 23.38 ಕೋಟಿಗಳಿಗೆ ಶೇ 100 ರಂತೆ ಅವಕಾಶ ಕಲ್ಪಿಸಿದ್ದರ ಪರಿಣಾಮದಿಂದಾಗಿ ಪ್ರಸಕ್ತ ವರ್ಷ

ಗಳಿಸಿದ ಲಾಭ ರೂ. 06.42 ಕೋಟಿಗಳ ನಂತರ 11.76 ಕೋಟಿ ನಿವ್ವಳ ಹಾನಿ ಬಿಟ್ಟರೆ ಕಾರ್ಯಚರಣೆಯಲ್ಲಿ ಯಾವದೇ ಕೊರತೆ ಇರುವದಿಲ್ಲವೆಂದು ಸಭೆಯು ಪರಿಗಣಿಸಿತು.

**ವಿಷಯ** 09 :– ದಿರ್ಘಾವಧಿ ಯೋಜನೆ ಮತ್ತು ವಾರ್ಷಿಕ ಕಾರ್ಯಾಚರಣೆ ಯೋಜನೆ, ಅನುಮೋದನೆ.

**ನಡುವಳಿಕೆಗಳು:=** ಈ ವರೆಗೂ ಪ್ರಾರಂಭಿಸಲಾದ ಎಲ್ಲಾ 11 ಶಾಖೆಗಳು ಅಭಿವೃದ್ಧಿ ಪಥದಲ್ಲಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಹಾಗೂ ವರದಿಸಾಲಿನಲ್ಲಿ ಕೋವಿಡ್‌ನಿಂದಾಗಿ ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸದಿದ್ದರಿಂದ ವರ್ಚುವಲ್ ಸಭೆ ಮೂಲಕ ಬ್ಯಾಂಕಿನ ಸಿಬ್ಬಂದಿ ವರ್ಗದವರಿಗೆ ಹಾಗೂ ಆಡಳಿತ ಮಂಡಳಿ ನಿರ್ದೇಶಕರಿಗೆ ವಿವಿಧರೀತಿಯ ತರಬೇತಿಗಳನ್ನು ಆಯೋಜಿಸಿ ತರಬೇತಿ ವ್ಯವಸ್ಥೆಗೊಳಿಸಿದ್ದನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.

**ವಿಷಯ** 10 :– 2022–23 ನೇ ಸಾಲಿನ ವಾರ್ಷಿಕ ಬಜೆಟ್‌ನ ಅನುಮೋದನೆ.

**ನಡುವಳಿಕೆಗಳು:=** 2022–23 ನೇ ಸಾಲಿನ ವಾರ್ಷಿಕ ಬಜಟ್‌ನ್ನು ಈ ಕೆಳಗಿನಂತೆ ಸಭೆಯು ಪರಿಶೀಲಿಸಿ ಅನುಮೋದಿಸಿತು.

## ::2023-2024 ನೇ ಸಾಲಿನ ಅಂದಾಜು ಅಯವ್ಯಯ ಪತ್ರಿಕೆ::

| ಉತ್ಪನ್ನದ ಬಾಬತ್ತು | | | | ರೂ.ಲಕ್ಷಗಳಲ್ಲಿ |
|---|---|---|---|---|
| ಕ್ರ.. | ಉತ್ಪನ್ನದ ಬಬ್ತುಗಳು | 2022-23 ನೇ ಸಾಲಿನ ಅಂದಾಜು ಉತ್ಪನ್ನ | 2022-23 ನೇ ಸಾಲಿನಲ್ಲಿ ಆದ ನಿವ್ವಳ ಉತ್ಪನ್ನ | 2023-24 ನೇ ಸಾಲಿನ ಅಂದಾಜು ಉತ್ಪನ್ನ |
| 1 | ಸಾಲಗಳ ಮೇಲಿನ ಬಡ್ಡಿ | **2200.00** | | **2200.00** |
| 2 | ಬ್ಯಾಂಕ ಗುಂತಾಯಿಸಿದ ಹಣದ ಬಡ್ಡಿ | **850.00** | | **850.00** |
| 3 | ಕಮಿಷನ್ | **5.00** | | **5.00** |
| 4 | ಸೇವಾ ಶುಲ್ಕ | **75.00** | | **75.00** |
| 5 | ಅರ್ಜಿಗಳ ಮಾರಾಟ | **10.00** | | **10.00** |
| 6 | ಸದಸ್ಯರ ಶುಲ್ಕ | **5.00** | | **5.00** |
| 7 | ಲಾಕರ್ ಬಾಡಿಗೆ | **20.00** | | **20.00** |
| 8 | ಇನ್ಸಿಡೆಂಟಲ್ ಚಾರ್ಜಸ್ | **50.00** | | **50.00** |
| 9 | ಎ.ಟಿ.ಎಂ./ಆದಾಯ | **75.00** | | **75.00** |
| 10 | ಇತರ ಉತ್ಪನ್ನಗಳು | **50.00** | | **50.00** |
| 11 | ಗುಂತಾವಣಿ ಮಾರಾಟದಿಂದ ಬಂದ ಲಾಭ | **200.00** | | **200.00** |
| 12 | 2019-20 ರ ಹಾನಿ | | | |
| | ಒಟ್ಟು | **3540.00** | | **3540.00** |

| ಖರ್ಚಿನ ಬಾಬತ್ತು. | ರೂ.ಲಕ್ಷಗಳಲ್ಲಿ |
|---|---|

| ಕ್ರ | ಖರ್ಚಿನ ಬಾಬ್ತುಗಳು | 2022-23 ನೇ ಸಾಲಿನ ಅಂದಾಜು ಖರ್ಚು | 2022-23 ನೇ ಸಾಲಿನಲ್ಲಿ ಆದ ನಿವ್ವಳ ಖರ್ಚು | 2023-24 ನೇ ಸಾಲಿನ ಅಂದಾಜು ಖರ್ಚು |
|---|---|---|---|---|
| 1 | ಕಟ್ಟಡ ಬಾಡಿಗೆ | **85.00** | | **85.00** |
| 2 | ಅಂಚೆ ವೆಚ್ಚ | **3.00** | | **3.00** |
| 3 | ಮುದ್ರಣ ಮತ್ತು ಸ್ಟೇಷನರಿ | **10.00** | | **10.00** |
| 4 | ನೌಕರದಾರರ ಸಂಬಳ | **330.00** | | **330.00** |
| 5 | ದೂರವಾಣಿ ವೆಚ್ಚ | **10.00** | | **10.00** |
| 6 | ವಿದ್ಯುತ್ ವೆಚ್ಚ | **25.00** | | **25.00** |
| 7 | ಆಡಳಿತಮಂಡಳಿ ಸದಸ್ಯರ ಫೀ ಹಾಗು ಪ್ರವಾಸ ಇತರೆ ಬತ್ಯೆ | **5.00** | | **5.00** |
| 8 | ಠೇವಣಿಗಳ ಮೇಲಿನ ಬಡ್ಡಿ | **2050.00** | | **2050.00** |
| 9 | ಅ.ನಿ.ನಿ.ಸಂಗ್ರಹಕಾರರ ಕಮಿಷನ್ | **50.00** | | **50.00** |
| 10 | ಲೆಕ್ಕ ತಪಾಸಣಿ ಫೀ | **10.00** | | **10.00** |
| 11 | ಆಸ್ತಿ ಹಾಗು ಗುಂತಾವಣಿ ಮೇಲೆ ಸವಕಳಿ, ದುರಸ್ತಿ | **60.00** | | **60.00** |
| 12 | ಇನ್ಸೂರನ್ಸ/ತೆರೆಗೆ | **110.00** | | **110.00** |
| 13 | ಪ್ರಚಾರ | **5.00** | | **5.00** |
| 14 | ಸಕ್ಯೋರಿಟಿ ಹಾಗು ಮೆಂಟನನ್ಸ್ | **50.00** | | **50.00** |
| 15 | ಸಂಶಯಾತ್ಮಕ ಸಾಲದ ನಿಧಿ | **50.00** | | **50.00** |
| 16 | ಅಫೀಸ್ ಖರ್ಚು | **20.00** | | **20.00** |
| 17 | ಎ.ಟಿ.ಎಂ./ಕೋರ ಬ್ಯಾಂಕಿಂಗ್ /ಎ.ಎಂ.ಸಿ ಖರ್ಚು | **50.00** | | **50.00** |
| 18 | ಕಮಿಷನ್ | **2.00** | | **2.00** |
| 19 | ಬ್ಯಾಂಕನಿಂದ ತೆಗೆದುಕೊಂಡ ಸಾಲದ ಬಡ್ಡಿ | **10.00** | | **10.00** |
| 20 | ದೇಣಿಗೆ | **10.00** | | **10.00** |
| | ಸಿಬ್ಬಂಧಿ ಪ್ರವಾಸ ಭತ್ತೆ | **8.00** | | **8.00** |

| | | | | |
|---|---|---|---|---|
| 21 | | | | |
| 22 | ವಾಹನ/ಇಂಧನ ಖರ್ಚು | 10.00 | | 10.00 |
| 23 | ಸದಸ್ಯತ್ವ ಶುಲ್ಕ/ಡೆಲಿಗೇಶನ ಶುಲ್ಕ | 3.00 | | 3.00 |
| 24 | ಬಡ್ಡಿ ರಬೇಟ್ | 70.00 | | 70.00 |
| 25 | ಪಿ.ಎಫ್, ಬ್ಯಾಂಕ ವಂತಿಗೆ | 30.00 | | 30.00 |
| 26 | ಇತರೆ ಖರ್ಚು | 10.00 | | 10.00 |
| 27 | ಮೈಕ್ರೋ ಕ್ರೆಡಿಟ ಸಿಬ್ಬಂದಿ ವೆಚ್ಚ | 10.00 | | 10.00 |
| 28 | ವಾರ್ತ ಪತ್ರಿಕೆ ಖರ್ಚು | 2.00 | | 2.00 |
| 29 | ಕಾನೂನು ಖರ್ಚು | 2.00 | | 2.00 |
| 30 | ಎ.ಬಿ.ಎನ್. ಫೀ | 15.00 | | 15.00 |
| 31 | ವಾರ್ಷಿಕ ಮಹಾಸಭೆ ಹಾಗು ಸಭೆಗಳ ವೆಚ್ಚ | 5.00 | | 5.00 |
| 32 | ಸಿಬ್ಬಂಧಿ ತರಬೇತಿ ವೆಚ್ಚ | 5.00 | | 5.00 |
| 33 | ಮಶೀನರಿ ರಿಪೇರಿ | 20.00 | | 20.00 |
| 34 | ಹೂಡಿಕೆಗಳ ಮೇಲೆ ಪ್ರೀಮಿಯಮ್ | 60.00 | | 60.00 |
| 35 | 2021-22 ನೇ ಸಾಲಿನ ಅಂದಾಜು ಲಾಭ (**Before Tax)** | 356.00 | | 356.00 |
| | ಒಟ್ಟು | 3540.00 | | 3540.00 |

<u>**ವಿಷಯ** 11 :– ಉಪ ವಿಧಗಳಲ್ಲಿ ನಿರ್ಧಿಷ್ಠಪಡಿಸಿದಂತೆ ನಿರ್ದಿಷ್ಠ ಮೀಸಲು ಮತ್ತು ಇತರೆ ನಿಧಿಗಳ ಸೃಜನೆ.</u>

**ಸನಡುವಳಿಕೆಗಳು:=** ಉಪ ವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನಿಧಿಗಳನ್ನು ಸೃಜನೆ ಮಾಡಲು ಮಹಾ ಸಭೆ ಅನುಮೋದಿಸಿತು.

<u>**ವಿಷಯ** 12 : – ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಾವಲೋಕನ</u>

**ನಡುವಳಿಕಗಳು=** ಬ್ಯಾಂಕಿನ ಲಾಭಂಶದಿಂದ ಸೃಜಿಸಲಾದ Contingency Reserve Fund ಕಳೆದ 3 ವರ್ಷ ಮೇಲ್ಪಟ್ಟಾಗಿನಿಂದಾಲು ಉಪಯೋಗಿಸದೇ ಇರುವುದರಿಂದ ಬ್ಯಾಂಕಿನ ಟೈರ್ 1 ನಿಧಿಗಳು ಹೆಚ್ಚಿಸುವ ಸಲುವಾಗಿ ಅದನ್ನು ಬ್ಯಾಂಕಿನ Statutory Reserve Fund ಗೆ ವರ್ಗಾಯಿಸಲು ಆಡಳಿತ ಮಂಡಳಿಯು ಶಿಫಾರಸ್ಸು ಮಾಡಿದ ಕ್ರಮವನ್ನು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**ವಿಷಯ 13 :– ಮಂಡಳಿ ಸದಸ್ಯರಿಂದ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ.**

**ನಡುವಳಿಕೆಗಳು:=** ಆಡಳಿತ ಮಂಡಳಿಯ ಪ್ರತಿ ಸದಸ್ಯರು ಉಪವಿಧಿಗಳಲ್ಲಿ ನಿಗಧಿ ಪಡಿಸಿದ ಸೇವೆಗಳನ್ನು ಉಪಯೋಗಿಸಿಕೊಂಡು ಅರ್ಹ ಸದಸ್ಯರ ಯಾದಿಯಲ್ಲಿ ಇರುವದನ್ನು ಮಹಾ ಸಭೆಯು ಪರಿಶೀಲಿಸಿ ಅನುಮೋದಿಸಿತು.

**ವಿಷಯ 14 :– ನಿರ್ದೇಶಕ ಮತ್ತು ಅವರ ಸಂಬಧಿಗೆ ನೀಡಿದ ಸಾಲದ, ಸುಸ್ತಿ ಸಾಲದ ಮತ್ತು ವಸೂಲಿ ಕ್ರಮದ ಪರಿಶೀಲನೆ.**

**ನಡುವಳಿಕೆಗಳು:=** ಭಾರತೀಯ ರಿಜರ್ವ ಬ್ಯಾಂಕಿನ ನಿಯಮದನುಸಾರವಾಗಿ ನಿರ್ದೇಶಕರಿಗೆ ಹಾಗೂ ಅವರ ಸಂಬಂಧಿಕರಿಗೆ ಠೇವಣೆಗಳ ಮೇಲೆ ಮಾತ್ರ ಸಾಲ ನೀಡಲಾಗಿದ್ದು, ಬೇರೆ ಯಾವುದೇ ರೀತಿಯ ಸಾಲಗಳನ್ನು ನೀಡಿರುವುದಿಲ್ಲವೆಂಬುದನ್ನು ಮತ್ತು ಯಾವುದೇ ಸುಸ್ತಿ ಸಾಲಗಳು ಇರುವುದಿಲ್ಲವೆಂಬುದನ್ನು ಪರಿಶೀಲಿಸಿ ಒಪ್ಪಿಗೆ ನೀಡಿತು.

**ವಿಷಯ 15:– ಒಟ್ಟು ಗೂಡಿಸುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ, ಹೊಣೆಗಾರಿಕೆಗಳ ವರ್ಗಾವಣೆ.**

**ನಡುವಳಿಕೆಗಳು:=** ಬ್ಯಾಂಕುಗಳ ವಿಲೀನ, ವಿಭಜನೆ ಮತು ಸ್ವತ್ತುಗಳ ಹೊಣೆಗಾರಿಕೆಗಳ ವರ್ಗಾವಣೆ ಯಾವುದೂ ಇಲ್ಲರುವುದಿಲ್ಲವೆಂಬ ಅಂಶವನ್ನು ಸಭೆಯು ಪರಿಶೀಲಿಸಿತು.

**ವಿಷಯ 16:–ಮಂಡಳಿಯ ಸಲಹೆಯ ಮೇರೆಗೆ ಯೋಗ್ಯ ಪ್ರಕರಣಗಳಲ್ಲಿ ಮುಳುಗು ಮತ್ತು ಹೋಕು ಬಾಕಿ ಸಾಲವನ್ನು ವಜಾ ಮಾಡಲು ನಿರ್ಧರಿಸುವ ಬಗ್ಗೆ.**

**ನಡುವಳಿಕೆಗಳು:=** 2021–22ನೇ ಸಾಲಿನಲ್ಲಿ ನಿರ್ದೇಶಕ ಮಂಡಳಿಯವರು ಮೈಕ್ರೋ ಸಾಲಕ್ಕೆ ಸಂಭಂಧಿಸಿದಂತೆ NPA ಮೊತ್ತ ರೂ 61.35 ಲಕ್ಷಗಳು 3 ವರ್ಷ ಮೇಲ್ಪಟ್ಟ ಬಾಕಿ ಆಗಿದ್ದು ಇದಕ್ಕೆ ಶೇ 100 ರಷ್ಟು ಅವಕಾಶ ಕಲ್ಪಿಸಿದ್ದರಿಂದ RBI ನಿಯಮಾನುಸಾರ Technical Write Off ಮಾಡಿದ ಮಾಹಿತಿಯನ್ನು ಮಹಾ ಸಭೆಯು ಪರಿಶೀಲಿಸಿ ಅನುಮೋದಿಸಿತು. ಕೋವಿಡ್ ಪರಿಣಾಮವು ಸುಸ್ತಿ ಸಾಲಗಾರ ಗ್ರಾಹಕರ ಮೇಲೆ ಗಂಭೀರ ಪರಿಣಾಮ ಬೀರಿದ್ದರಿಂದ ಸಾಲ ಮರುಪಾವತಿದಾರರಿಗೆ ಸಾಲಗಾರರಿಗೆ ಅನುಕೂಲ ಕಲ್ಪಿಸಲು ಅವರಿಗೆ ವಧಿಸುತ್ತಿರುವ ಶೇ 16 ರ ಬಡ್ಡಿ ಮತ್ತು ದಂಡಬಡ್ಡಿಯ ಬದಲಾಗಿ ಶೇ 12 ರ

ಬಡ್ಡಿ ಆಕರಿಸಿ ಸುಸ್ತಿ ಬಡ್ಡಿ ಹಾಗೂ ಇತರೆವೆಚ್ಚಗಳಲ್ಲಿ ರಿಯಾಯತಿ ನೀಡುವ ಅಧಿಕಾರವನ್ನು ಆಡಳಿತ ಮಂಡಳಿಗೆ ನೀಡಲು ಮಹಾಸಭೆ ನಿರ್ಣಯಿಸಿತು.

**ವಿಷಯ** 17:– ಮಂಡಳಿಯು ಶಿಸ್ತಿನ ವಿಚಾರಣೆ ನೆಡಸಿ, ದಂಡನೆಗೆ ಒಳಗಾದ ನೌಕರನ ಅಪೀಲಿನ ಬಗ್ಗೆ ತೀರ್ಮಾನ.

**ನಡುವಳಿಕೆಗಳು:=** ಅಂತಹ ಯಾವುದೇ ಅಪೀಲು ಇರುವುದಿಲ್ಲವೆಂದು ಸಭೆಯು ಪರಿಗಣಿಸಿತು.

**ವಿಷಯ** 18 :– ಮಂಡಳಿಯ ನಿರ್ದೇಶಕರನ್ನು ತೆಗೆದು ಹಾಕುವ ಬಗ್ಗೆ.

**ನಡುವಳಿಕೆಗಳು:=** ಅಂತಹ ಯಾವುದೇ ಪ್ರಕರಣಗಳು ಇರುವುದಿಲ್ಲವೆಂದು ಸಭೆಯು ಪರಿಗಣಿಸಿತು.

**ವಿಷಯ** 19:– ಪ್ರಕರಣ 37 ರ ಅಡಿಯಲ್ಲಿ ವಿಚಾರಣೆ ವರದಿ ಇದ್ದಲ್ಲಿ ಕೈಗೊಂಡ ಕ್ರಮಗಳ ವರದಿ.

**ನಡುವಳಿಕೆಗಳು:=** ಅಂತಹ ಯಾವುದೇ ಪ್ರಕರಣಗಳು ಇರುವುದಿಲ್ಲವೆಂದು ಸಭೆಯು ಪರಿಗಣಿಸಿತು.

**ವಿಷಯ** 20 :– ಇತರೆ ಸಹಕಾರಿಗಳಲ್ಲಿ ಹೊಂದಿರುವ ಸದಸ್ಯತ್ವದ ವರದಿ.

**ನಡುವಳಿಕೆಗಳು:=** ನಮ್ಮ ಬ್ಯಾಂಕು ಈ ಕೆಳಕಂಡ ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಹೊಂದಿರುತ್ತದೆಂಬ ಮಾಹಿತಿಯನ್ನು ಪರಿಶೀಲಿಸಿ ಒಪ್ಪಿಗೆ ನೀಡಿತು.

1. ರಾಯಚೂರು ಜಿಲ್ಲಾ ಮದ್ಯವರ್ತಿ ಸಹಕಾರ ಬ್ಯಾಂಕ ನಿ., ರಾಯಚೂರು.
2. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.
3. ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾ ಮಂಡಳ, ಬೆಂಗಳೂರು.
4. ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾ ಮಂಡಳ, ನವದೆಹಲಿ.
5. ಬಸವೇಶ್ವರ ಸುದ್ದಿ ಮಾದ್ಯಮ ಬೆಂಗಳೂರು,
6. ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿಯಮಿತ ರಾಯಚೂರು,

**ವಿಷಯ** 21 :– ಪ್ರಕರಣ 14, 15 ಮತ್ತು 16 ರಡಿ ಸೃಜಸಿದ ಸಂಸ್ಥೆ ಇದ್ದಲ್ಲಿ, ಅದರ ವಾರ್ಷಿಕ ವರದಿ ಮತ್ತು ಲೆಕ್ಕಗಳ ಪುನರಾವಲೋಕನ.

**ನಡುವಳಿಕೆಗಳು:=** ಇಂತಹ ಪ್ರಕರಣಗಳಿಲ್ಲದಿರುವದನ್ನು ಸಭೆಯು ಪರಿಶೀಲಿಸಿತು.

**ವಿಷಯ** 22 :– ಮಂಡಳಿಯಿಂದ ಸದಸ್ಯತ್ವ ನಿರಾಕರಿಸಲಾದ ವ್ಯಕ್ತಿಯ ಅಪೀಲು ಇದ್ದಲ್ಲಿ ಅದರ ಪರಿಗಣನೆ.

**ನಡುವಳಿಕೆಗಳು:=** ಅಂತಹ ಯಾವುದೇ ಅಪೀಲುಗಳು ಇರುವುದಿಲ್ಲವೆಂಬುದನ್ನು ಸಭೆಯು ಪರಿಶೀಲಿಸಿತು.

**<u>ವಿಷಯ 23 :– ನಿರ್ದೇಶಕರ ಅಥವಾ ಮುಖ್ಯ ಕಾರ್ಯನಿರ್ವಾಹಕನ ಸಂಬಂಧಿಗಳು ನೇಮಕಗೊಂಡಿದ್ದಲ್ಲಿ ಅ ಪಟ್ಟಿಯ ಪರಿಗಣನೆ.</u>**
**ನಡುವಳಿಕೆಗಳು:=** ಅಂತಹ ಯಾವುದೇ ನೇಮಕಾತಿಗಳು ನೆಡದಿರುವುದಿಲ್ಲವೆಂಬುದನ್ನು ಸಭೆಯು ಪರಿಶೀಲಿಸಿತು.
**<u>ವಿಷಯ 24 :–</u>** ಬ್ಯಾಂಕಿನ ಉಪವಿಧಿಗಳ ತಿದ್ದುಪಡಿ ಮಾಡುವ ಕುರಿತು.
**ನಡುವಳಿಕೆಗಳು:=** ಯಾವುದು ಇರುವುದಿಲ್ಲ.

**<u>ವಿಷಯ 25 :–ನಿರ್ದೇಶಕರ ಮತ್ತು ಪದಾಧಿಕಾರಿಗಳ ನಡೆತೆ ಸಂಹಿತೆಯ ಅನುಮೋದನೆ.</u>**
**ನಡುವಳಿಕೆಗಳು:=** ನಿರ್ದೇಶಕರ ಮತ್ತು ಪದಾಧಿಕಾರಿಗಳ ನೀತಿ ಸಂಹಿತೆಯು ಜಾರಿಯಲ್ಲಿರುವದರಿಂದ ಅವುಗಳನ್ನು ಮುಂದುವರೆಯಿಸಲು ನಿರ್ಣಯಿಸಿತು.

**<u>ವಿಷಯ 26:– ಹಿಂದಿನ ವರ್ಷ ಸದಸ್ಯರನ್ನು ಸೇರಿಸಿಕೊಂಡ ಹಾಗೂ ತೆಗೆದು ಹಾಕಿದ ಬಗ್ಗೆ ಸಂಕ್ಷಿಪ್ತ ವರದಿ.</u>**
**ನಡುವಳಿಕೆಗಳು:=** ಈ ಕೆಳಗಿನ ವಿವರಗಳನ್ನು ಸಭೆಯು ಪರಿಶೀಲಿಸಿ ಒಪ್ಪಿಗೆ ನೀಡಿತು.

ಅ) 31.03.2021 ಸದಸ್ಯರ ಸಂಖ್ಯೆ –25386,
ಆ) 2021–22 ನೊಂದಣಿಯಾದ ಸದಸ್ಯರ ಸಂಖ್ಯೆ–669
ಇ) 2021–22 ರಲ್ಲಿ ವಾಪಸಾತಿ ಸದಸ್ಯರ ಸಂಖ್ಯೆ– 00
ಈ) 31.03.2021 ಕ್ಕಿರುವ ಸದಸ್ಯರು– 26055

**<u>ವಿಷಯ 27 :– ಹಿಂದಿನ ವರ್ಷ ಬಜಟ್‌ಗಿಂತ ಹೆಚ್ಚುವರಿ ವೆಚ್ಚಕ್ಕೆ ಅನುಮೋದನೆ ಪಡೆಯುವುದು.</u>**
**ನಡುವಳಿಕೆಗಳು:=** 2021–22 ನೇ ಸಾಲಿನಲ್ಲಿ ಬಜೆಟಗಿಂತ ಯಾವದೇ ಹೆಚ್ಚಿನ ವೆಚ್ಚಗಳಿಲ್ಲವೆಂಬ ವಿವರಗಳನ್ನು ಸಭೆಯು ಪರಿಶೀಲಿಸಿ ಒಪ್ಪಿಗೆ ನೀಡಿತು.

**<u>ವಿಷಯ 28 :– ಸಿಬ್ಬಂದಿ ವೃಂದ ಬಲ ಮತ್ತು ವೇತನ ಶ್ರೇಣಿಯನ್ನು ಅನುಮೋದಿಸುವುದು.</u>**
**ನಡುವಳಿಕೆಗಳು=**ನಮ್ಮ ಬ್ಯಾಂಕು ಹೊಂದಿರುವ 1 ಪ್ರಧಾನ ಕಛೇರಿ ಹಾಗೂ 11 ಶಾಖೆಗಳನ್ನು ಗಮನದಲ್ಲಿರಿಸಿಕೊಂಡು. ಈ ಕೆಳಗಿನಂತೆ ಸಿಬ್ಬಂದಿ ವೃಂದಬಲ ನಿಗದಿಪಡಿಸಲು ಸಭೆಯು ಒಪ್ಪಿಗೆ ನೀಡಿತು.

| ಕ್ರ.ಸಂ. | ಹುದ್ದೆಯ ಹೆಸರು | ಹುದ್ದೆ ಸಂಖ್ಯೆ |
|---|---|---|
| 1 | ವ್ಯವಸ್ಥಾಪಕ ನಿರ್ದೇಶಕರು | 01 |
| 2 | ಪ್ರಧಾನ ವ್ಯವಸ್ಥಾಪಕರು | 01 |
| 3 | ವ್ಯವಸ್ಥಾಪಕರು (ಪ್ರ.ಕಾ) 03<br>ಪರಿವೀಕ್ಷಣಾಧಿಕಾರಿಗಳು 05 | 08 |

| | | |
|---|---|---|
| 4 | ಶಾಖಾ ವ್ಯವಸ್ಥಾಪಕರು | 15 |
| 5 | ಅಧಿಕಾರಿಗಳು | 15 |
| 6 | ಕಿರಿಯ ಸಹಾಯಕರು | 60 |
| 7 | ಮೈಕ್ರೊ ಸಿಬ್ಬಂಧಿಗಳು<br>11 ಇ.ಒ.<br>39 ಸಿ.ಎಸ್.ಆರ್. | 50 |
| | **ಒಟ್ಟು** | **150** |

2021–22ನೇ ಸಾಲಿನಲ್ಲಿ ಶಾಖೆಗಳ ಕಾರ್ಯ ನಿರ್ವಹಣೆ ಆಧಾರವಾಗಿ ಹಾಗೂ ಮೈಕ್ರೋ ಕ್ರಡಿಟ್ ಯೋಜನೆಯ ವಿಸ್ತರಣೆಗನುಗಣವಾಗಿ ಖಾಲಿ ಇರುವ ಸ್ಥಾನಗಳಿಗೆ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ಆಡಳಿತ ಮಂಡಳಿಗೆ ಅಧಿಕಾರ ನೀಡಲು ಸಭೆಯು ನಿರ್ಣಯಿಸಿತು.

"ಬ್ಯಾಂಕಿನ ಸಿಬ್ಬಂದಿಗಳ ವೇತನ ಶ್ರೇಣಿಗಳನ್ನು ಮುಂದಿನ ಪರಿಷ್ಕರಣೆಯವರೆಗೆ ಈ ಕೆಳಗಿನಂತೆ ಮುಂದುವರಿಸಲು ಮಹಾಸಭೆಯು ತೀರ್ಮಾನಿಸಿತು."

| ಕ್ರ.ಸಂ. | ಹುದ್ದೆಯ ಹೆಸರು | ವೇತನ ಶ್ರೇಣಿ |
|---|---|---|
| 1 | ವ್ಯವಸ್ಥಾಪಕ ನಿರ್ದೇಶಕರು | |
| 2 | ಪ್ರಧಾನ ವ್ಯವಸ್ಥಾಪಕರು | 24000–45300 |
| 3 | ಶಾಖಾ ವ್ಯವಸ್ಥಾಪಕರು (Grande I) | 20000–40200 |
| 4 | ಶಾಖಾ ವ್ಯವಸ್ಥಾಪಕರು (Grande II) | 17650–32300 |
| 5 | ಅಧಿಕಾರಿಗಳು | 15000–27100 |
| 6 | ಕಿರಿಯ ಸಹಾಯಕರು | 13500–25000 |
| 7 | ಇ.ಒ. | 7500–300 |
| 8 | ಸಿ.ಎಸ್.ಆರ್. | 5000–250 |

ಮೇಲಿನ ವೇತನ ಶ್ರೇಣಿಗಳು 2013ರಲ್ಲಿ ನಿಗದಿಪಡಿಸಿದ್ದವುಗಳಾಗಿದ್ದು ಪರಿಷ್ಕರಣೆ ಆಗದಿರುವುದರಿಂದ ಮಧ್ಯಂತರ ಪರಿಹಾರನಿಧಿ ನಿಗದಿಪಡಿಸಿದ ಆಡಳಿತ ಮಂಡಳಿಯ ಕ್ರಮಕ್ಕೆ ಸಭೆಯ ಒಪ್ಪಿಗೆ ನೀಡಿತು.

ಮಾಸಿಕ ಮಧ್ಯಂತರ ಪರಿಹಾರ ಭತ್ಯೆ : ಪ್ರಧಾನ ವ್ಯವಸ್ಥಾಪಕರು ರೂ 10,000.00
ಶಾಖಾ ವ್ಯವಸ್ಥಾಪಕರು ರೂ 5,000.00
ಅಧಿಕಾರಿಗಳು ರೂ 4,000.00
ಕಿರಿಯ ಸಹಾಯಕರು ರೂ 3000.00

ತುಟ್ಟಿಭತ್ಯೆ 01.04.2022 ಕ್ಕೆ ಶೇ 50 ಹಾಗೂ ಪ್ರತಿ ಜುಲೈ ಹಾಗೂ ಜನವರಿ 1 ರಿಂದ ಶೇ. 3 ರಂತೆ ಹೆಚ್ಚಳ ಮಾಡಲು ಸಭೆಯು ಒಪ್ಪಿಗೆ ನೀಡಿತು.

**ವಿಷಯ 29:–** ಪ್ರಸ್ತುತ ವರ್ಷದಲ್ಲಿ ವಿತರಿಸಬೇಕಾದ ಷೇರುಗಳ ಸಂಖ್ಯೆ ನಿರ್ದರಿಸುವುದು

**ನಡುವಳಿಕೆಗಳು:=** ಪ್ರಸ್ತುತ ವರ್ಷದಲ್ಲಿ ಸಾಲಗಳ ಮೂಂಜೂರಾತಿ ಆಧಾರವಾಗಿ ಹೊಸ ಶೇರುಗಳನ್ನು ವಿತರಿಸಲು ಆಡಳಿತ ಮಂಡಳಿಗೆ ಅಧಿಕಾರ ನೀಡಲು ನಿರ್ಣಯಸಲಾಯಿತು.

**ವಿಷಯ 30 :–** ಸಿಬ್ಬಂದಿ ಸೇವಾ ನಿಯಮಗಳು ಹಾಗು ವ್ಯವಹಾರ ನಿಯಮಗಳಿಗೆ ಅನುಮೋದನೆ.

**ನಡುವಳಿಕೆಗಳು:=** ಸಿಬ್ಬಂದಿ ಸೇವಾ ನಿಯಮ ಮತ್ತು ಇತರೆ ವ್ಯವಹಾರ ನಿಯಮಗಳನ್ನು ಈಗಾಗಲೇ ರಚಿಸಿಕೊಂಡಿದ್ದನ್ನು ಸಭೆಯು ಪರಿಶೀಲಿಸಿ ಅವಶ್ಯಕವೆನಿಸಿದಲ್ಲಿ ಸಮಯಾನುಸಾರ ತಿದ್ದುಪಡೆ ಮಾಡಿಕೊಳ್ಳುವದರೊಂದಿಗೆ ಅವುಗಳನ್ನು ಮುಂದುವರೆಯಿಸಲು ನಿರ್ಣಯಿಸಿತು.

ವಿಷಯ 31 :– **ಅದ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇನ್ನಿತರ ವಿಷಯಗಳು.**

**ನಡುವಳಿಕೆಗಳು:=** ಯಾವದೂ ಇರುವದಿಲ್ಲಾ.

ಮೇಲಿನಂತೆ ಸಭೆಗೆ ಮಂಡಿಸಲಾದ ವಿಷಯಗಳನ್ನು ಚರ್ಚಿಸಿ ಸರ್ವಾನುಮತದಿಂದ ನಿರ್ಣಯಗಳನ್ನು ಕೈಗೊಂಡನಂತರ ಶ್ರೀ ರಾಮಲಿಂಗಪ್ಪ ನಿರ್ದೇಶಕರ ವ್ಯವಸ್ಥಾಪಕರ ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡಿತು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
ಅಧ್ಯಕ್ಷರು

ಸ್ಥಳ:– ಮಾನವಿ
ದಿನಾಂಕ:–28.08.2022